# ಕರ್ನಾಟಕ ಸರ್ಕಾರ

ಸಂಖ್ಯೆ:ಆರ್‌ಡಿ 60 ಎಲ್‌ಜಿಪಿ 2004.

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:17.06.2005.

## ಸುತ್ತೋಲೆ

ದಿನಾಂಕ:26.11.2004ರ ಸುತ್ತೋಲೆಯಲ್ಲಿನ ಸೂಚನೆಗಳನ್ನು ಪಾಲಿಸುವುದು ಅಲ್ಲದೇ ಭೂ ಮಂಜೂರಾತಿ ಪ್ರಕರಣಗಳಲ್ಲಿ ಸರ್ಕಾರದ ಪೂರ್ವಾನುಮೋದನೆಯನ್ನು ಕೋರಿ ಬರುವ ಪ್ರಸ್ತಾವನೆಗಳಲ್ಲಿ ಈ ಕೆಳಕಂಡ ಅಂಶಗಳ ಬಗ್ಗೆ ದಾಖಲೆಗಳ ಆಧಾರ ಖಚಿತಪಡಿಸಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ಜಿಲ್ಲಾಧಿಕಾರಿಗಳು / ಉಪ ವಿಭಾಗಾಧಿಕಾರಿಗಳು ಹಾಗೂ ತಹಶೀಲ್ದಾರರ ಗಮನಕ್ಕೆ ತರಲಾಗಿದೆ.

1) ಮಂಜೂರಾತಿಗೆ ಪ್ರಸ್ತಾಪಿಸಿದ ಜಮೀನು ಈ ಹಿಂದೆ ಯಾವುದೇ ಸಂಘ ಸಂಸ್ಥೆಗಳಿಗೆ/ ವ್ಯಕ್ತಿಗೆ ಮಂಜೂರಾತಿಸಿಲ್ಲ ಎಂಬುದರ ಬಗ್ಗೆ ಖಚಿತಪಡಿಸುವುದು.

2) ಸದರಿ ಮಂಜೂರಾತಿ ವಿಸ್ತೀರ್ಣಕ್ಕೆ ಸಂಬಂಧಿಸಿದ ಜಮೀನುಗಳು ಯಾವುದೇ ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇಲ್ಲ ಎಂಬುದನ್ನು ಖಚಿತಪಡಿಸುವುದು.

3) ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ಅಥವಾ ಅರಣ್ಯ ಇಲಾಖೆಯಿಂದ ಕಂದಾಯ ಇಲಾಖೆಗೆ ಜಮೀನುಗಳು ಸಂಬಂಧಿಸಿದ ಕಾಯಿದೆ ಅಂದರೆ ಅರಣ್ಯ ಸಂರಕ್ಷಣಾ ಕಾಯಿದೆ ಅಥವಾ ಭೂ ಕಂದಾಯ ಕಾಯಿದೆಗಳಲ್ಲಿ ವರ್ಗಾವಣೆ ಸಕ್ರಮವಾಗಿ ಅಂದರೆ ಅರಣ್ಯ ಕಾಯ್ದೆ ಅಡಿಯಲ್ಲಿ ಡಿನೋಟಿಫ್ಯಾಯಿಡ್ ಆಗಿರುವುದನ್ನು ಅದರಂತೆ ಜಮೀನು ಕಂದಾಯ ಇಲಾಖೆಯ ವ್ಯಾಪ್ತಿಯಲ್ಲಿ ಬರುವುದನ್ನು ಖಾತ್ರಿ ಪಡಿಸುವುದು.

ಸರ್ಕಾರಕ್ಕೆ ಸಲ್ಲಿಸಿರುವ ಮಂಜೂರಾತಿ ಪ್ರಸ್ತಾವನೆಗಳಲ್ಲಿ ಈ ಮೇಲ್ಕಂಡ ಅಂಶಗಳನ್ನು ವರದಿಯಲ್ಲಿ ದೃಢೀಕರಿಸಿ ತಪ್ಪದೇ ಸಲ್ಲಿಸುವಂತೆ ತಿಳಿಸಲಾಗಿದೆ.

ಸಹಿ.
(ಎಸ್.ಎಂ.ಜಾಮದಾರ),
ಸರ್ಕಾರದ ಕಾರ್ಯದರ್ಶಿ.
ಕಂದಾಯ ಇಲಾಖೆ.

(ಎನ್.ಎ.ಮಾರ್ಗರೇಟ್),
ಸರ್ಕಾರದ ಅಧೀನ ಕಾರ್ಯದರ್ಶಿ.
ಕಂದಾಯ ಇಲಾಖೆ (ಭೂ.ಮಂ).

ಎಲ್ಲಾ ಜಿಲ್ಲಾಧಿಕಾರಿಗಳು / ಉಪವಿಭಾಗಾಧಿಕಾರಿಗಳು / ತಹಸೀಲ್ದಾರರುಗಳು.

ನಂ:ಎಲ್‌ಎನ್‌ಡಿ (2)73:05-06

ಜಿಲ್ಲಾಧಿಕಾರಿಗಳ ಕಚೇರಿ,
ಹಾಸನ, ದಿನಾಂಕ: 05-07-2005.

ಮೇಲ್ಕಂಡ ಪತ್ರದ ಪ್ರತಿಯನ್ನು ಜಿಲ್ಲೆಯ ಉಪ ವಿಭಾಗಾಧಿಕಾರಿಗಳಿಗೆ ಮತ್ತು ಎಲ್ಲಾ ತಹಸೀಲ್ದಾರರಿಗೆ ಅಗತ್ಯ ಕ್ರಮಕ್ಕಾಗಿ ರವಾನಿಸಿದೆ.

ಜಿಲ್ಲಾಧಿಕಾರಿಗಳ ಪರವಾಗಿ
ಹಾಸನ ಜಿಲ್ಲೆ, ಹಾಸನ.